ಹುನಗುಂದ ತಾಲ್ಲೂಕಿನ ಇಂಗಳಗಿ ಏತನೀರಾವರಿ ಯೋಜನೆ

254 (148) ಶ್ರೀ ರಾಜಶೇಖರ ಏ ಶೀಲವಂತ (ಗುಳ್ಳೇದಗುಡ್ಡ):

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗುಳ್ಳೇದಗುಡ್ಡ ಮತ ಕ್ಷೇತ್ರದ ಹುನಗುಂದ ತಾಲ್ಲೂಕಿನ ಇಂಗಳಗಿ ಏತ ನೀರಾವರಿ ಯೋಜನೆ ಯಾವಾಗ ಪ್ರಾರಂಭವಾಯಿತು, ಸದರಿ ಯೋಜನೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

(ಆ) ಹಣ ಬಿಡುಗಡೆ ಮಾಡದಿದ್ದಲ್ಲಿ ಕಾರಣಗಳೇನು; ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)

(ಅ) ಈ ಏತ ನೀರಾವರಿ ಯೋಜನೆಯು ಪೂರ್ಣಗೊಂಡು 1988ರಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯ ನಿರ್ಮಾಣಕ್ಕಾಗಿ ರೂ. 22.55 ಲಕ್ಷ ಖರ್ಚು ಮಾಡಲಾಗಿದೆ.

(ಆ) ಸದರಿ ಯೋಜನೆಯು 1988ರಲ್ಲಿ ಪೂರ್ಣಗೊಂಡು ಈಗ ಸುಸ್ಥಿತಿಯಲ್ಲಿರುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಹುನಗುಂದ ತಾಲ್ಲೂಕಿನ ಮದಾಪುರ ಏತ ನೀರಾವರಿ ಯೋಜನೆ

255(147) ಶ್ರೀ ರಾಜಶೇಖರ ಏಶೀಲವಂತ (ಗುಳ್ಳೇದಗುಡ್ಡ):

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ)1984-85ನೇ ಸಾಲಿನಲ್ಲಿ ಗುಳ್ಳೇದಗುಡ್ಡ ಮತ ಕ್ಷೇತ್ರದ ಹುನಗುಂದ ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಏತ ನೀರಾವರಿ ಕುರಿತು ಸರ್ವೆ ಮಾಡಿರುವುದು ನಿಜವೇ;

(ಆ) ಸದರಿ ಯೋಜನೆಯನ್ನು ಕೈಬಿಡಲು ಕಾರಣವೇನು;

(ಇ) ಸದರಿ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ.ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರಜಲ ಅಭಿವೃದ್ಧಿ ಸಚಿವರು)

(ಅ) ನಿಜವಲ್ಲ.

(ಆ) ಕೈಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಸದರಿ ಕಾಮಗಾರಿಯು ಚಿಕ್ಕ ನೀರಾವರಿ ಬಜೆಟ್‌ನಲ್ಲಿ ಸೇರ್ಪಡೆಯಾದ ನಂತರ ಸಮೀಕ್ಷೆ ಕಾರ್ಯ ಕೈಗೆತ್ತಿಕೊಳ್ಳಲಾಗುವುದು.

Energy meters in Bangalore City

257 (79) Sri Ramalinga Reddy (Jayanagara):

Will the Hon'ble Minister of State for Energy be pleased to state

a) The No. of houses in Bangalore City to which energy meters have not been installed;

b) The reasons for not installing the energy meters;